ಕರ್ನಾಟಕ ಸರ್ಕಾರ

# ಕಾಲೇಜು ಶಿಕ್ಷಣ ಇಲಾಖೆ

ದೂರವಾಣಿ: 080-22297760, 22297824,

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ:ಶೈವಿ:48:ಸ್ಕೌಟ್ಸ್ & ಗೈಡ್ಸ್:2018-19

ದಿನಾಂಕ: 18.06.2018.

## ಅಧಿಕೃತ ಜ್ಞಾಪನ

ವಿಷಯ: ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ವತಿಯಿಂದ ದಿನಾಂಕ: 22.08.2018 ರಿಂದ 28.06.2018 ರವರೆಗೆ ಆಯೋಜಿಸಿರುವ ರಾಜ್ಯ ಮಟ್ಟದ ರೋವರ್ ಸ್ಕೌಟ್ಸ್ ಲೀಡರ್ಸ್‌ಗಳ ಮೂಲ ತರಬೇತಿಗೆ ನಿಯೋಜಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/564/2018-19 ದಿನಾಂಕ:08.06.2018 & ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/458/2018-19 ದಿನಾಂಕ:31.05.2018.

******

ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಡ್ಡಾಯವಾಗಿ ಭಾರತ್ ಸ್ಕೌಟ್ಸ್ & ಗೈಡ್ಸ್ ಘಟಕಗಳನ್ನು ಸ್ಥಾಪಿಸಿ ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಈ ಘಟಕಗಳನ್ನು ನಿರ್ವಹಿಸಲು ತರಬೇತಿ ಪಡೆದ ಅಧ್ಯಾಪಕರುಗಳಿಗೆ ಜವಾಬ್ದಾರಿ ನೀಡಬೇಕಾಗಿರುತ್ತದೆ. ಕೆಲವು ಕಾಲೇಜುಗಳಲ್ಲಿ ಅಗತ್ಯ ತರಬೇತಿಯನ್ನು ಪಡೆಯದ ಅಧ್ಯಾಪಕರಿಗೆ ಈ ರೀತಿಯ ಜವಾಬ್ದಾರಿಗಳನ್ನು ವಹಿಸುತ್ತಿರುವುದನ್ನು ಗಮನಿಸಲಾಗಿದೆ.

ಈ ನಿಟ್ಟಿನಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ವತಿಯಿಂದ ದಿನಾಂಕ: 22.06.2018 ರಿಂದ 28.06.2018 ರವರೆಗೆ ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಹರಿಹರ ತಾ. ದಾವಣಗೆರೆ ಜಿಲ್ಲೆ, ಇಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ರೇಂಜರ್ ಲೀಡರ್ / ರೋವರ್ ಸ್ಕೌಟ್ಸ್ ಲೀಡರ್ಸ್‌ಗಳ ಮೂಲ ತರಬೇತಿಗೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ತರಬೇತಿ ಪಡೆಯದೇ ಘಟಕಗಳನ್ನು ನಿರ್ವಹಿಸುತ್ತಿರುವ ಪುರುಷ ಅಧ್ಯಾಪಕರುಗಳನ್ನು ಸದರಿ ತರಬೇತಿಗೆ ಕಡ್ಡಾಯವಾಗಿ ನಿಯೋಜಿಸಲು ಸೂಚಿಸಲಾಗಿದೆ ಹಾಗೂ ಸದರಿ ಅವಧಿಗೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ. ಈ ಸಂಬಂಧ ಉಲ್ಲೇಖಿತ ಪತ್ರವನ್ನು ಲಗತ್ತಿಸುತ್ತಾ ಪತ್ರದಲ್ಲಿ ತಿಳಿಸಿರುವ ಶುಲ್ಕಗಳನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಖಾತೆಯಿಂದ ಭರಿಸಲು ಸೂಚಿಸಲಾಗಿದೆ.

Web-site
ಸ.ಕ.ಇ

(ಕಡತವು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಅಡಕ: ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ರವರ ಉಲ್ಲೇಖಿತ ಪತ್ರ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಸದರಿ ತರಬೇತಿಗೆ ನಿಯೋಜಿತರಾಗುವ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಯ ಹಿಂದಿನ ದಿನವೇ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
2. ಶ್ರೀ ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ: 080-22297760, 22297824.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.

ಸಂಖ್ಯೆ:ಕಾಶಿಇ:ಶೈವಿ:48:ಸ್ಕೌಟ್ಸ್ & ಗೈಡ್ಸ್:2018-19

ದಿನಾಂಕ: 18.06.2018.

**ಅಧಿಕೃತ ಜ್ಞಾಪನ**

ವಿಷಯ: ಭಾರತ್ ಸ್ಕೌಟ್ಸ್ & ಗೈಡ್ಸ್ ಮೂಲ ತರಬೇತಿಗೆ ಅಧ್ಯಾಪಕರುಗಳನ್ನು ನಿಯೋಜಿಸುವ ಬಗ್ಗೆ

ಉಲ್ಲೇಖ: ರಾಜ್ಯ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಕಛೇರಿ ಪತ್ರ ಸಂಖ್ಯೆ: ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/550/2018-19 ದಿನಾಂಕ:02.06.2018.

******

ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, ರವರ ವತಿಯಿಂದ ದಿನಾಂಕ:22.06.2018 ರಿಂದ 28.06.2018 ರವರೆಗೆ ಮೂಲ ತರಬೇತಿಯನ್ನು ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ & ಗೈಡ್ಸ್ ತರಬೇತಿ ಮತ್ತು ಶಿಬಿರ ಕೇಂದ್ರ, ಹರಿಹರ ತಾ. ದಾವಣಗೆರೆ ಜಿಲ್ಲೆ ಇಲ್ಲಿ ಆಯೋಜಿಸಲಾಗಿದ್ದು, ಸದರಿ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲು ಅಧ್ಯಾಪಕರುಗಳನ್ನು ಆಯ್ಕೆ ಮಾಡಲಾಗಿದ್ದು, ನಿಯೋಜಿಸುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ, ಸದರಿ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲು ಈ ಕೆಳಕಂಡ ಅಧ್ಯಾಪಕರುಗಳಿಗೆ ಅನುಮತಿ ನೀಡಲಾಗಿದೆ. ಹಾಗೂ ಸದರಿ ತರಬೇತಿಯಲ್ಲಿ ಭಾಗವಹಿಸಿದ ಬಗ್ಗೆ ಹಾಜರಾತಿ ಪ್ರಮಾಣ ಪತ್ರವನ್ನು ಒಪ್ಪಿಸುವ ನಿಬಂಧನೆಗೊಳಪಟ್ಟು ಪ್ರಯಾಣ ದಿನಗಳೂ ಸೇರಿದಂತೆ ಅನ್ಯಕಾರ್ಯನಿಮಿತ್ತ ರಜೆಯನ್ನು ಮಂಜೂರು ಮಾಡಲಾಗಿದೆ.

| ಕ್ರ.ಸಂ. | ಅಧ್ಯಾಪಕರ ಹೆಸರು ಶ್ರೀ / ಶ್ರೀಮತಿ | ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನ ಹೆಸರು |
|---|---|---|
| 1. | ಶುಭ ಎಸ್. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು. |
| 2. | ಶಕುಂತಲ | ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ. |
| 3. | ದಿವ್ಯ ಜ್ಯೋತಿ | ಮಾಧವ ಪೈ ಮೆಮೋರಿಯಲ್ ಕಾಲೇಜು, ಮಣಿಪಾಲ. |
| 4. | ದಿವ್ಯಾಶ್ರೀ ಜಿ | ವಿವೇಕಾನಂದ ಪದವಿ ಕಾಲೇಜು, ಪುತ್ತೂರು. |
| 5. | ನಾಗೇಂದ್ರಪ್ಪ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು. |
| 6. | ಉದಯ ಶೆಟ್ಟಿ | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು. |

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ: -

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ನಿಯೋಜಿತ ಅಧ್ಯಾಪಕರುಗಳನ್ನು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ಸೂಚಿಸಿ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಸೂಚಿಸಲಾಗಿದೆ
2. ಸಂಬಂಧಿಸಿದ ಅಧ್ಯಾಪಕರುಗಳಿಗೆ ( ಪ್ರಾಂಶುಪಾಲರ ಮುಖಾಂತರ).

ಪ್ರತಿಯನ್ನು:

1. ರಾಜ್ಯ ಕಾರ್ಯದರ್ಶಿಗಳು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ, ರಾಜ್ಯ ಕೇಂದ್ರ ಕಾರ್ಯಾಲಯ, # 39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001.
2. ಶ್ರೀ ಶ್ರೀಕಾಂತ್, ಸಮನ್ವಯಾಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ. 4. ಕಛೇರಿ ಪ್ರತಿ.

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017: (ಗೈಡ್ ವಿಭಾಗ) +91-80-2226 7470: ಫ್ಯಾಕ್ಸ್: +91-80-2226 1047

ಮಿಂಚಂಚೆ: shq@bsgkarnataka.org / shantigruha@bsgkarnataka.orgಅಂತರ್ಜಾಲ: www.bsgkarnataka.org


ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ 458 /2018-19 ದಿನಾಂಕ: 31.05.2018

ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು


ಕಾಲೇಜು ಶಿಕ್ಷಣ ಆಯುಕ್ತರ
ಆಪ್ತ ಶಾಖೆ
ಸಂಖ್ಯೆ............
ದಿನಾಂಕ 08 JUN 2018


ಮಾನ್ಯರೆ,

ವಿಷಯ:– ರೇಂಜರ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತು.

* * * *

ಶಿಬಿರದ ವಿವರಗಳು ಈ ಕೆಳಕಂಡಂತಿವೆ :

| | |
|---|---|
| ತರಬೇತಿ ಶಿಬಿರ | ರೇಂಜರ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ |
| ಸ್ಥಳ | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್/ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ |
| ದಿನಾಂಕ | ೨೨.೦೬.೨೦೧೮ ರಿಂದ ೨೮.೦೬.೨೦೧೮ರವರೆಗೆ |
| ಹಾಜರಾಗುವ ದಿನಾಂಕ | ೨೨.೦೬.೨೦೧೮ ಬೆಳಗ್ಗೆ ೧೦.೦೦ ಗಂಟೆಯ ಒಳಗೆ |
| ಬಿಡುಗಡೆ ದಿನಾಂಕ | ೨೮.೦೬.೨೦೧೮ ಸಂಜೆ ೪ ಗಂಟೆಗೆ |
| ನೊಂದಾವಣಿ ಶುಲ್ಕ | ತಲಾ ರೂ.೨೫/- |
| ದಳ ನೊಂದವಣಿ ಶುಲ್ಕ | ರೇಂಜರ್ ಘಟಕಕ್ಕೆ ವಾರ್ಷಿಕ ರೂ.೧೯೪/- ಸ್ಕೌಟ್-ಗೈಡ್ ಮಾಸಿಕ ವಾರ್ತಾ ಪತ್ರಿಕೆ ಚಂದದಾರರ ಶುಲ್ಕ ರೂ.೧೦೦/- ಒಂದು ವರ್ಷಕ್ಕೆ |
| ಯಾರು ಭಾಗವಹಿಸಬಹುದು | ಸರ್ಕಾರಿ ಅರೆಸರ್ಕಾರಿ, ಖಾಸಗಿ, ಪದವಿ ಪೂರ್ವ/ಪ್ರಥಮ ದರ್ಜೆ/ಪಾಲಿಟೆಕ್ನಿಕ್ ಕಾಲೇಜುಗಳ ಮಹಿಳಾ ಉಪನ್ಯಾಸಕಿಯರು – ಕಛೇರಿ ಅಥವಾ ಗ್ರಂಥಾಲಯ ಮಹಿಳಾ ಸಿಬ್ಬಂದಿಗಳು ಮತ್ತು ಜಿಲ್ಲಾ ಸಂಸ್ಥೆಯ ಶಿಫಾರಸ್ಸನ್ನು ಪಡೆದು ೨೧ ವರ್ಷ ತುಂಬಿದ ಮುಕ್ತ ತಂಡದಿಂದ ಮಹಿಳೆಯರು ಭಾಗವಹಿಸಬಹುದು. |
| ಊಟ ಮತ್ತು ವಸತಿ | ರಾಜ್ಯ ಸಂಸ್ಥೆಯು ಏರ್ಪಡಿಸಿದೆ |
| ಸಮವಸ್ತ್ರ | ಕಾಲೇಜುಗಳ ರೋವರ್ ರೇಂಜರ್ ನಿಧಿಯಿಂದ ರೂ.೨೦೦೦/- ಭರಿಸಬಹುದು. ಸಮವಸ್ತ್ರದ ವಿನ್ಯಾಸ ಮತ್ತು ದೊರೆಯುವ ಸ್ಥಳ ಮುಂತಾದ ವಿವರಗಳನ್ನು ನಿಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ :೦೮೦-೨೨೨೬೭೪೭೦ ಗೆ ಸಂಪರ್ಕಿಸಿರಿ. ಶಿಬಿರಕ್ಕೆ ಸಮವಸ್ತ್ರ ಕಡ್ಡಾಯವಾಗಿರಲೇಬೇಕು |


ಕ್ರಮ ಸಂಖ್ಯೆ: 13
12/6/18

..೨..

| | |
|---|---|
| ಪ್ರಯಾಣ ವೆಚ್ಚ | ಕಾಲೇಜಿನಿಂದ ಶಿಬಿರ ನಡೆಯುವ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಆಯಾ ಕಾಲೇಜಿನ ರೇಂಜರ್ ನಿಧಿಯಿಂದ ಭರಿಸುವುದು. ಮುಕ್ತ ತಂಡದಿಂದ ಭಾಗವಹಿಸುವ ನಾಯಕರುಗಳು ರಾಜ್ಯ ಸಂಸ್ಥೆಗೆ ಮುಂಚಿತವಾಗಿಯೆ ಜಿಲ್ಲಾ ಸಂಸ್ಥೆಯ ಮುಖಾಂತರ ದಿನಾಂಕ ೧೨.೦೬.೨೦೧೮ರ ಒಳಗೆ ತಿಳಿಸುವುದು. |
| ತರಬೇಕಾದ ವಸ್ತುಗಳು | ಬದಲಾಯಿಸಲು ಉಡುಪು, ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, ೨೦೦ ಫೇಜ್‌ನ ೨ ನೋಟ್ ಪುಸ್ತಕ, ಡ್ರಾಯಿಂಗ್ ಶೀಟ್, ಸೂಜಿದಾರ, ಸ್ಕೆಚ್ ಪೇನ್ಸ್, ಲೇಖನ ಸಾಮಗ್ರಿಗಳು, ಮೂರು ಮೀಟರ್ ಕಾಟನ್ ಬಿಳಿ ಹಗ್ಗ, ರೈನ್ ಕೋಟ್, ಛತ್ರಿ, ಟಾಚ್, ಕಪ್ಪು ಶೂ, ಕ್ಯಾಮಲ್ ಕಲ್ಲರ್ ಸಾಕ್ಸ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು ಮತ್ತು ಔಷಧಿ. |
| ಜಿಲ್ಲೆಗೆ ನಿಗಧಿಪಡಿಸಿರುವ ಕೋಟ | ೪ ಮಹಿಳಾ ಉಪನ್ಯಾಸಕಿಯರು ಹೆಚ್ಚಿನ ಕೋಟಾಕ್ಕೆ ಎಸ್.ಟಿ.ಸಿ(ಗೈ)ರವರನ್ನು ಸಂಪರ್ಕಿಸಿ, ಮೊಬೈಲ್ ಸಂಖ್ಯೆ: ೯೪೪೨೬೧೪೧೧೬ |
| ನೊಂದಾಯಿಸಲು ಕಡೆಯ ದಿನಾಂಕ | ೧೨.೦೬.೨೦೧೮ |
| ಶಿಬಿರವನ್ನು ತಲುಪುವ ವಿಧಾನ | ದಾವಣಗೆರೆಯಿಂದ ಬರುವವರು ಹೊಂಡದ ಸರ್ಕಲ್‌ನಿಂದ ಕೊಂಡಜ್ಜಿ ಶಿಬಿರಕ್ಕೆ ಮತ್ತು ಹರಿಹರ ದಿಂದ ಬರುವವರು ಕುರುಬರಹಳ್ಳಿ ಸರ್ಕಲ್‌ನಿಂದ ಕೊಂಡಜ್ಜಿ ಶಿಬಿರಕ್ಕೆ ಆಟೋಗಳ ಸೌಲಭ್ಯವಿರುತ್ತದೆ. |

ಶಿಬಿರ ನೊಂದಣಿ ಶುಲ್ಕ, ದಳ ನೋಂದಣಿ ಶುಲ್ಕ ಮತ್ತು ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣವನ್ನು ಆಯಾ ಕಾಲೇಜಿನ ರೋವರ್ ಮತ್ತು ರೇಂಜರ್ ನಿಧಿಯಿಂದ, ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ. ದಯಮಾಡಿ ಅಭ್ಯರ್ಥಿಗಳನ್ನು ನಿಯೋಜಿಸಲು ಕೋರುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಚಿನ್ನಸ್ವಾಮಿ ರೆಡ್ಡಿ)
ರಾಜ್ಯ ಕಾರ್ಯದರ್ಶಿ

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ: (ಸ್ಕೌಟ್ ವಿಭಾಗ)+91-80-2226 0017; (ಗೈಡ್ ವಿಭಾಗ) +91-80-2226 7470; ಫ್ಯಾಕ್ಸ್: +91-80-2226 1047

ಮಿಂಚಂಚೆ: shq@bsgkarnataka.org / shantigruha@bsgkarnataka.orgಅಂತರ್ಜಾಲ: www.bsgkarnataka.org


**ಸಂಖ್ಯೆ:** ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/೪೫೮/೨೦೧೮-೧೯ **ದಿನಾಂಕ:** ೩೦.೦೫.೨೦೧೮


ಕಾಲೇಜು ಶಿಕ್ಷಣ ಆಯುಕ್ತರ ಆಪ್ತ ಶಾಖೆ
ಸಂಖ್ಯೆ 51
ದಿನಾಂಕ 08 JUN 2018


ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೆ,

ವಿಷಯ:- ರೋವರ್ಸ್ ಸ್ಕೌಟ್ಸ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರಕ್ಕೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತ

******

ಶಿಬಿರದ ವಿವರಗಳು ಈ ಕೆಳಕಂಡಂತಿವೆ :

| | |
|---|---|
| ತರಬೇತಿ ಶಿಬಿರ | ರೋವರ್ಸ್ ಸ್ಕೌಟ್ಸ್ ಲೀಡರ್ಸ್‌ಗಳಿಗೆ ರಾಜ್ಯ ಮಟ್ಟದ ಮೂಲ ತರಬೇತಿ ಶಿಬಿರ |
| ಸ್ಥಳ | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಜಿಲ್ಲೆ. |
| ದಿನಾಂಕ | ೨೨.೦೬.೨೦೧೮ ರಿಂದ ೨೮.೦೬.೨೦೧೮ರವರೆಗೆ |
| ಹಾಜರಾಗುವ ದಿನಾಂಕ | ೨೨.೦೬.೨೦೧೮ ಬೆಳಗ್ಗೆ ೧೦.೦೦ ಗಂಟೆಗೆ (ತಡವಾಗಿ ಬಂದವರನ್ನು ಸೇರಿಸಲಾಗುವುದಿಲ್ಲ). |
| ಬಿಡುಗಡೆ ದಿನಾಂಕ | ೨೮.೦೬.೨೦೧೮ ಸಂಜೆ ೪ ಗಂಟೆಯ ಒಳಗೆ |
| ನೊಂದಾವಣಿ ಶುಲ್ಕ | ತಲಾ ರೂ.೨೫/- |
| ದಳ ನೊಂದವಣಿ ಶುಲ್ಕ | ರೋವರ್ ಸ್ಕೌಟ್ ಘಟಕಕ್ಕೆ ವಾರ್ಷಿಕ ರೂ.೧೯೪/- ಸ್ಕೌಟ್ ಮತ್ತು ಗೈಡ್ ಮಾಸಿಕ ವಾರ್ತಾ ಪತ್ರಿಕೆ ಚಂದಾದಾರರ ಶುಲ್ಕ ರೂ.೧೦೦/- ಒಂದು ವರ್ಷಕ್ಕೆ. |
| ಯಾರು ಭಾಗವಹಿಸಬಹುದು | ಪದವಿಪೂರ್ವ ಮತ್ತು ಪ್ರಥಮದರ್ಜೆ ಕಾಲೇಜುಗಳ ಪುರುಷ ಉಪನ್ಯಾಸಕರು ಮತ್ತು ಜಿಲ್ಲಾ ಸಂಸ್ಥೆಯ ಶಿಫಾರಸ್ಸನ್ನು ಪಡೆದು ೨೧ ವರ್ಷ ತುಂಬಿದ ಮುಕ್ತ ತಂಡದಿಂದ ಪುರುಷರು ಭಾಗವಹಿಸಬಹುದು. |
| ಸಮವಸ್ತ್ರ | ಸಮವಸ್ತ್ರಕ್ಕೆ (ಬೂದಿ ಬಣ್ಣದ ಅರ್ಧತೋಳಿನ ಬುಜಪಟ್ಟಿ, ಮುಚ್ಚಳವಿರುವ ಎರಡು ಜೇಬುಳ್ಳ ಷರ್ಟ್, ನೀಲಿ ಬಣ್ಣದ ಪ್ಯಾಂಟ್ (ಪೋಲಿಸರ ಸಮವಸ್ತ್ರದಂತೆ) ಸ್ಟ್ರಾಪ್, ಓಗಲ್, ಬ್ಲೂ ಬೆರೆಟ್ |

| | |
|---|---|
| | ಟೋಪಿ, ಕರಿ ಬಣ್ಣದ ಲೇಸ್ ಇರುವ ಷೂ, ಕರಿ ಬಣ್ಣದ ಕಾಲು ಚೀಲ). ಕಾಲೇಜುಗಳ ರೋವರ್ ರೇಂಜರ್ ನಿಧಿಯಿಂದ ರೂ.೨೦೦೦/- ಭರಿಸಬಹುದು. ಸಮವಸ್ತ್ರದ ವಿನ್ಯಾಸ ಮತ್ತು ದೊರೆಯುವ ಸ್ಥಳ ಮುಂತಾದ ವಿವರಗಳನ್ನು ನಿಮ್ಮ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ವತಿಯಿಂದ ಪಡೆಯಲು ಕೋರಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ :೦೮೦-೨೨೨೬೭೪೭೦ ಗೆ ಸಂಪರ್ಕಿಸಿರಿ. ಶಿಬಿರಕ್ಕೆ ಸಮವಸ್ತ್ರ ಕಡ್ಡಾಯವಾಗಿರಲೇಬೇಕು. |
| ಪ್ರಯಾಣ ವೆಚ್ಚ | ಕಾಲೇಜಿನಿಂದ ಶಿಬಿರ ನಡೆಯುವ ಸ್ಥಳಕ್ಕೆ ಹೋಗಿ ಬರುವ ಪ್ರಯಾಣ ವೆಚ್ಚವನ್ನು ಕಾಲೇಜಿನ ರೋವರ್ ನಿಧಿಯಿಂದ ಭರಿಸುವುದು. (ಮುಕ್ತ ತಂಡದಿಂದ ಭಾಗವಹಿಸುವ ನಾಯಕರುಗಳು ರಾಜ್ಯ ಸಂಸ್ಥೆಗೆ ಮುಂಚಿತವಾಗಿಯೆ ಜಿಲ್ಲಾ ಸಂಸ್ಥೆಯ ಮುಖಾಂತರ ದಿನಾಂಕ ೧೨.೦೬.೨೦೧೮ರ ಒಳಗೆ ತಿಳಿಸುವುದು.) |
| ಊಟ ಮತ್ತು ವಸತಿ | ರಾಜ್ಯ ಸಂಸ್ಥೆ ವತಿಯಿಂದ ಊಟ ಮತ್ತು ವಸತಿ ಸೌಕರ್ಯವನ್ನು ಏರ್ಪಡಿಸಿದೆ. |
| ತರಬೇಕಾದ ವಸ್ತುಗಳು | ಸಮವಸ್ತ್ರ, ಬದಲಾಯಿಸಲು ಉಡುಪು, ಬೆಚ್ಚಗಿನ ಹಾಸಿಗೆ, ತಟ್ಟೆ, ಲೋಟ, ಲೇಖನ ಸಾಮಗ್ರಿಗಳು, ಮೂರು ಮೀಟರ್ ಕಾಟನ್ ಬಿಳಿಹಗ್ಗ, ಬರವಣಿಗೆಯ ಸಾಮಗ್ರಿಗಳು, ಸೂಜಿದಾರ, ವೈಯಕ್ತಿಕ ಔಷದಿ, ಶೇವಿಂಗ್ ಸೆಟ್, ಟಾಯ್‌ಲೇಟ್ ಕಿಟ್, ಛತ್ರಿ, ಟಾರ್ಚ್ ಮತ್ತು ಇತರೆ ಶಿಬಿರಕ್ಕೆ ಬೇಕಾಗುವ ಹಾಗೂ ವೈಯಕ್ತಿಕ ವಸ್ತುಗಳು. |
| ನಿಗಧಿಪಡಿಸಿರುವ ಕೋಟಾ | ಪ್ರತಿ ಜಿಲ್ಲೆಯಿಂದ ೪ ನಿಯೋಜಿಸುವುದು. ಹೆಚ್ಚಿನ ಕೋಟಾಕ್ಕೆ ಎಸ್.ಟಿ.ಸಿ(ಸ್ಕೌ)ರವರನ್ನು ಸಂಪರ್ಕಿಸಿ, ಮೊಬೈಲ್ ಸಂಖ್ಯೆ: ೯೯೭೨೨೦೧೪೩೨೯ |
| ನೊಂದಾಯಿಸಲು ಕಡೆ ದಿನಾಂಕ | ೧೨-೦೬-೨೦೧೮ |
| ಶಿಬಿರವನ್ನು ತಲುಪುವ ವಿಧಾನ | ದಾವಣಗೆರೆ ಮಾರ್ಗವಾಗಿ ಬರುವರು ಹೊಂಡದ ಸರ್ಕಲ್‌ನಿಂದ ಕೊಂಡಜ್ಜಿ, ಹರಿಹರ ಮಾರ್ಗವಾಗಿ ಬರುವವರು ಕುರುಬರಹಳ್ಳಿ ಸರ್ಕಲ್‌ನಿಂದ ಕೊಂಡಜ್ಜಿ ಆಟೋಗಳ ಸೌಲಭ್ಯವಿರುತ್ತದೆ. |

ಶಿಬಿರ ನೊಂದಣಿ ಶುಲ್ಕ, ದಳ ನೋಂದಣಿ ಶುಲ್ಕ ಮತ್ತು ಸ್ಕೌಟ್ ಗೈಡ್ ಮಾಸ ಪತ್ರಿಕೆ ವಾರ್ಷಿಕ ಚಂದಾಹಣವನ್ನು ಆಯಾ ಕಾಲೇಜಿನ ರೋವರ್ ಮತ್ತು ರೇಂಜರ್ ನಿಧಿಯಿಂದ, ಸರ್ಕಾರಿ ಆದೇಶದಂತೆ ಭರಿಸಲು ಅವಕಾಶವಿರುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಚಿನ್ನಸ್ವಾಮಿ ರೆಡ್ಡಿ)

ರಾಜ್ಯ ಕಾರ್ಯದರ್ಶಿ